O.S.101/2019 ಪಿ.ಡಬ್ಲೂಃ 5

ಸಾಕ್ಷಿಯನ್ನು ದಿಃ **16.07.2022** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ಎಂ.ಬಿ. ವಕೀಲರಿಂದಃ

ಭಾಗ ಕೇಳಿ ಗ್ರಾಮದಲ್ಲಿ ಪಂಚಾಯಿತಿ ಮಾಡಿದ್ದೇವು ಎಂದು ಹೇಳಿದ್ದು ಅದು ಯಾವಾಗ ಎಂದು ನಿಖರ ದಿನಾಂಕ ಹೇಳಲಾಗುವುದಿಲ್ಲ ಅದು 3 ವರ್ಷದ ಹಿಂದೆ ಮಾಡಿದ್ದೇವು. ಪಂಚಾಯಿತಿಯಲ್ಲಿ ನಾನು ಬೋರಯ್ಯ, ಸಿದ್ದರಾಜು ಮತ್ತು ಇನ್ನು ಕೆಲವು ಊರ ಯಜಮಾನರು ಸೇರಿದ್ದರು ಅವರ ಹೆಸರು ನೆನಪಿಲ್ಲ ಎಂದು ನುಡಿದು ವಾದಿ ನಿಂಗಮ್ಮ ನವರ ಹಿರಿಮಗ ರೇವಣ್ಣನವರ ಮಾವ ಕೂಡ ಇದ್ದರು ಅವರ ಹೆಸರು ಗೊತ್ತಿಲ್ಲ.ಅವರು ಈಗ ಇಲ್ಲ ಮರಣ ಹೊಂದಿದ್ದಾರೆ. ಈ ರೀತಿ ಪಂಚಾಯಿತಿಯನ್ನು ಎರಡು ಬಾರಿ ಸೇರಿದ್ದೇವು. ಪಂಚಾಯಿತಿ ಮಾಡುತ್ತಿದ್ದೇವೆ ನೀವು ಬನ್ನಿ ಎಂದು ಪತ್ರವೇನು ಬಂದಿರಲ್ಲ ನನ್ನ ಚಿಕ್ಕಪ್ಪನ ಮಗ ಕರೆದಿದ್ದರು. ಇನ್ನೂ ಕೆಲವರು ಇದ್ದರು. ಎಲ್ಲರ ಹೆಸರು ಗೊತ್ತಿಲ್ಲ. ಪಂಚಾಯಿತಿಯಲ್ಲಿ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರಲಿಲ್ಲ. ಯಾವ ಸರ್ವೆ ನಂ. ಮತ್ತು ಎಷ್ಟು ವಿಸ್ತೀರ್ಣದ ಜಮೀನುಗಳು ಎಂಬುದನ್ನು ಪಂಚಾಯಿತಿಯಲ್ಲಿ ಹೇಳಿರಲಿಲ್ಲ. 1 ಮನೆ ಮತ್ತು ಖಾಲಿ ಸೈಟ್ ಬಗ್ಗೆ ಕೂಡ ಪಂಚಾಯಿತಿಯಲ್ಲಿ ಮಾತನಾಡಿದ್ದೇವು. ಅವುಗಳ ದಾಖಲೆಗಳನ್ನು ಪರಿಶೀಲನೆ ಮಾಡಿರಲಿಲ್ಲ. ಪಂಚಾಯಿತಿಯಲ್ಲಿ ಯಾವುದೆ ಬರವಣಿಗೆ ಆಗಲಿಲ್ಲ. ಪಂಚಾಯಿತಿಯಲ್ಲಿ ಯಾರ್ಯಾರು ಎಷ್ಟೆಷ್ಟು ಭಾಗ ಕೊಡಬೇಕು ಎಂದು ತೀರ್ಮಾಣ ಮಾಡಿರಲಿಲ್ಲ. ಪಂಚಾಯಿತಿ ಸೇರಿದ್ದೇವು ಎಂದು ನಾನು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಜಮೀನಗಳ ಸರ್ವೆ ನಂ, ವಿಸ್ತೀರ್ಣ ಮತ್ತು ಯಾರ್ಯಾರ ಹೆಸರಿಗೆ ಖಾತೆ

ಎಂಬ ವಿಚಾರ ನನಗೆ ಗೊತ್ತಿಲ್ಲ. ಪಿ. ಡಬ್ಲ್ಯೂ 3, 6 ಮತ್ತು ನಾನು ಎಲ್ಲರೂ ಸೇರಿ ಕಟ್ಟುಕತೆ ಕಟ್ಟಿದ್ದೇವೆ ಎಂದರೆ ಸರಿಯಲ್ಲ.

ವಾದಿಗಳೆಲ್ಲಾ ಮೈಸೂರಿನ ಲಿಲತಾದ್ರಿಪುರ ಗ್ರಾಮದ ಸಕ್ಕಳ್ಳಿ ರಸ್ತೆಯಿಲ್ಲಿರುವ ಗಾಯತ್ರಿ ಪಾರ್ಮ್ ನಲ್ಲಿ ವಾಸಿಸುತ್ತಿದ್ದರು ಎಂದರೆ ಸಿದ್ದಯ್ಯ ಮತ್ತು ವಾದಿ ನಿಂಗಮ್ಮ ಯಾವುದೋ ಪಾರ್ಮ್ ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದರು ಅದರ ಹೆಸರು ನನಗೆ ಗೊತ್ತಿಲ್ಲ. ಪಿ.ಡಬ್ಲ್ಯೂ 6 ಬೋರಯ್ಯ ನವರ ದೊಡ್ಡಪ್ಪ ಬಿ.ಸಿದ್ದಯ್ಯ ನವರು ಮೈಸೂರಿನ ಜ್ಯೋತಿನಗರದಲ್ಲಿ ಸಿ.ಆರ್.ಪಿ.ಎಫ್. ಮುಖ್ಯ ಪೇದೆಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಅವರು ಪೊಲೀಸ ಎಂದು ಗೊತ್ತು ಆದರೆ ಯಾವ  ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು ಎಂಬುದು ಗೊತ್ತಿಲ್ಲ. ಈ ಪೊಲೀಸ್ ಸಿದ್ದಯ್ಯ ಮತ್ತು ವಾದಿ ನಿಂಗಮ್ಮನವರ ವಿವಾಹದಿಂದ ವಾದಿ 2 ರಿಂದ 4 ರವರು ಜನಿಸಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ವಾದಿ 2 ರಿಂದ 4 ವರು ಮೈಸೂರಿನಲ್ಲೆ ವ್ಯಾಸಂಗ ಮಾಡಿದ್ದಾರೆ ಎಂದರೆ ವ್ಯಾಸಂಗ ಮಾಡಿರುವುದು ಗೊತ್ತು ಆದರೆ ಅವರು ಯಚಲನಹಳ್ಳಿ ವಾಸಿಗಳಾಗಿದ್ದಾರೆ. ಪೊಲೀಸ್ ಸಿದ್ದಯ್ಯನವರು ವಾದಿ ನಿಂಗಮ್ನ ನವರ ಜೀವನಾಂಶಕ್ಕೆ ಎನೇನು ಬೇಕು ವ್ಯವಸ್ಥೆ ಮಾಡಿ ಜೀವನ ನಡೆಸುತ್ತಿದ್ದರು ಎಂದರೆ ಸರಿ. 2 ಮತ್ತು 3 ನೇ ವಾದಿಯವರು ಮೈಸೂರು ಸಿದ್ದಾರ್ಥ ನಗರದ ಗಣಪತಿ ಸಚಿದಾನಂದನವರ ಶಾಲೆಯಲ್ಲಿ ವ್ಯಾಸಂಗ ಮಾಡಿದ್ದಾರೆ ಎಂದರೆ ಸ್ವಲ್ಪ ದಿನ ವ್ಯಾಸಂಗ ಮಾಡಿರಬಹುದು ಆದರೆ ಅವರು ಯಲಚನಹಳ್ಳಿಯಲ್ಲಿ ವ್ಯವಸಾಯ ಮಾಡಿಕೂಂಡೆ ವ್ಯಾಸಂಗ ಮಾಡುತ್ತಿದ್ದರು ಎನ್ನುತ್ತಾರೆ. ವಾದಿಯವರು ಯಲಚನಹಳ್ಳಿಯಲ್ಲಿ ವಾಸ ಮಾಡುತ್ತಿರಲಿಲ್ಲ ಆದರೆ ಬಿ.ಸಿದ್ದಯ್ಯನವರಿಗೆ ಯಲಚನಹಳ್ಳಿಯಲ್ಲಿ ಇದ್ದ ಸರ್ವೆ ನಂ. 16/1 ರ 6 ಎಕರೆ 16 ಗುಂಟೆ ಜಮೀನಿನ ಸಲುವಾಗಿ ಯಚಲನಹಳ್ಳಿಗೆ ವಾಸ ಪ್ರಾರಂಭಿಸಿದರು ಎಂದರೆ ಸುಳ್ಳು. ದಾವಾ ಐಟಂ  ನಂ. 1 ರಿಂದ 4 ಮತ್ತು ಸರ್ವೆ ನಂ. 16/1 ರ ಜಮಿಲನುಗಳು ಅಕ್ಕಪಕ್ಕದಲ್ಲೆ ಇವೆ ಎಂದರೆ ದಾಯಾದಿಗಳ ಜಮೀನು ಆಗಿರುವುದರಿಂದ ಅಕ್ಕ-ಪಕ್ಕದಲ್ಲೆ ಇರಬಹುದು. ಪಿ.ಡಬ್ಲ್ಯೂ 3 ಸಿದ್ದಲಿಂಗಸ್ವಾಮಿ ರವರ ಮಗಳನ್ನು 3 ನೇ ವಾದಿಗೆ ಮದುವೆ ಮಾಡಿಕೊಟ್ಟಿರುವ ಕಾರಣ ಪೊಲೀಸ್ ಬಿ. ಸಿದ್ದಯ್ಯನವರ

ಆಸ್ತಿಯಲ್ಲಿ ಅವರುಗಳಿಗೆ ಭಾಗ ಹೋಗುತ್ತದೆ ಎಂದು ಅದನ್ನು ತಪ್ಪಿಸುವ ಸಲುವಾಗಿ ವಾದಿಯವರಿಂದ ಈ ದಾವೆಯನ್ನು ಹೂಡಿಸಲಾದೆ ಎಂದರೆ ಸರಿಯಲ್ಲ. ಪ್ರತಿವಾದಿಯವರ ತಂದೆ ಸಿದ್ದಯ್ಯನ ತಾಮಾಂಕಿತ ದುರುಪಯೋಗ ಪಡಿಸಿಕೊಂಡು ಈ ದಾವೆ ತಂದಿದ್ದಾರೆ ಎಂದರೆ ಸರಿಯಲ್ಲ.

ಪ್ರತಿವಾದಿ 1 ಮತ್ತು 3 ರವರ ಪರ ವಕಿಲರು ಮೇಲ್ಕಂಡ 2 ನೇ ಪ್ರತಿವಾದಿ ಪರ ಪಾಟೀ ಸವಾಲನ್ನು ಅನುಮೋದಿಸಿ, ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.